ವಿಷಯ:- ರಾಜ್ಯದಲ್ಲಿರುವ ಭಾಗ್ಯ ಜ್ಯೋತಿಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ111(134)

ಶ್ರೀ ಯು.ಬಿ. ಬಣಕರ್ (ಹಿರೇಕೆರೂರು)

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ರಾಜ್ಯದಲ್ಲಿತಾಲ್ಲೂಕುವಾರು ಕೊಟ್ಟಿರುವ ಇದುವರೆಗಿನ ಭಾಗ್ಯ ಜ್ಯೋತಿಗಳ ಸಂಖ್ಯೆ 30-11-94ಕ್ಕೆ ಎಷ್ಟು?

ಆ) ವಿದ್ಯುತ್ ಬಿಲ್ ಕಟ್ಟಿದ ಕೆಲವು ಕಡೆಗೆ ಸಂಪರ್ಕ ನಿಲ್ಲಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಯಾವುದೇ ಭಾಗ್ಯ ಜ್ಯೋತಿ ಪ್ರಯೋಜನ ದಾರರಿಂದ ವಿದ್ಯುತ್ ಚಾರ್ಜ್ ವಸೂಲು ಮಾಡದಂತೆ ಆದೇಶ ನೀಡಲಾಗುವುದೇ?

ಶ್ರೀ ಜೆ.ಹೆಚ್. ಪಟೇಲ್
(ಉಪ ಮುಖ್ಯಮಂತ್ರಿಗಳು)

ಅ) 30-11-94ರಲ್ಲಿರುವಂತೆ ತಾಲ್ಲೂಕುವಾರು ಕೊಟ್ಟಿರುವ ಭಾಗ್ಯ ಜ್ಯೋತಿ ಸಂಪರ್ಕಗಳ ಒಟ್ಟು ಸಂಖ್ಯೆ 8,65,232.

ಆ) ವಿದ್ಯುತ್ ಬಿಲ್ಲಿನ ಬಾಬ್ತು ಬಾಕಿ ಇದ್ದರೂ ಭಾಗ್ಯ ಜ್ಯೋತಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ನಿಲ್ಲಿಸಬಾರದುಯೆಂದು ಮಂಡಳಿಯು ಆದೇಶ ನೀಡಿದೆ.

ಇ) ಮಂಡಳಿಯು ಎದುರಿಸುತ್ತಿರುವ ಕಠಿಣ ಆರ್ಥಿಕ ಪರಿಸ್ಥಿತಿಯಲ್ಲಿ ಭಾಗ್ಯಜ್ಯೋತಿ ಪ್ರಯೋಜನದಾರರಿಂದ ವಿದ್ಯುತ್ ಚಾರ್ಜನ್ನು ವಸೂಲು ಮಾಡದಂತೆ ಆದೇಶವನ್ನು ಜಾರಿಗೊಳಿಸುವುದು ಕಷ್ಟಕರ.

ವಿಷಯ:- ಅಳಂದ ತಾಲ್ಲೂಕಿನ ಗ್ರಾಮಗಳಿಗೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ112(323)

ಶ್ರೀ ರೇವು ನಾಯಕ ಬಿಳಮಗಿ (ಕಮಲಾಪುರ

ಮಾನ್ಯ ಉಪ ಮುಖ್ಯಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಅಳಂದ ತಾಲ್ಲೂಕು ಖಜುರಿ ಮತ್ತು ಏಕೆ ಸಲಗರ ಹಾಗೂ ನರೋನಾ ಸರ್ಕಲ್ ಗ್ರಾಮಗಳಿಗೆ ವಿದ್ಯುತ್ ಕೊರತೆಯನ್ನು ತುಂಬಲು ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಜೋಡಿಸುವ ಯೋಜನೆ ಇದೆಯೇ?